**All India Radio: Bangalore**
**National Bulletin In Kannada**
**02.07.2025  19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.07.2025  19.35 p.m.**

**<><><><>**

ಮುಖ್ಯಾಂಶಗಳು

1. ಐದು ರಾಷ್ಟ್ರಗಳ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಪ್ರವಾಸ ಪ್ರಾರಂಭ
2. ವಿಶ್ವಸಂಸ್ಥೆಯ ಅಣುಶಕ್ತಿ ನಿಗಾ ಸಂಘಟನೆ - ಐಎಇಎ ಗೆ ಸಹಕಾರ ಸ್ಥಗಿತಗೊಳಿಸುವ ವಿಧೇಯಕಕ್ಕೆ ಇರಾನ್ ಅಧ್ಯಕ್ಷರ ಇಂದು ಅಂಕಿತ
3. ಪವಿತ್ರ ಅಮರನಾಥ್ ಯಾತ್ರೆ ನಾಳೆ ಆರಂಭ ; ೩೮ ದಿನಗಳ ಯಾತ್ರೆಗೆ ವ್ಯಾಪಕ ಬಂದೋಬಸ್ತ್
4. ಭಾರತ-ಇಂಗ್ಲೆಂಡ್ ೨ನೇ ಟೆಸ್ಟ್ ಕ್ರಿಕೆಟ್ ; ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ ೩ ವಿಕೆಟ್ ನಷ್ಟಕ್ಕೆ ೧೬೧ ರನ್ ಗಳಿಕೆ ಪ್ರಗತಿಯಲ್ಲಿ

<><><><>

ಪ್ರಧಾನಿ ನರೇಂದ್ರ ಮೋದಿ ಅವರು ಐದು ರಾಷ್ಟ್ರಗಳ ಭೇಟಿಗಾಗಿ ಇಂದು ಪ್ರಯಾಣ ಬೆಳೆಸಿದ್ದಾರೆ. ಇಂದು ಅವರು ಘಾನಾ ದೇಶದತ್ತ ತೆರಳುತ್ತಿದ್ದು, ನಂತರ ಟ್ರಿನಿಡಾಡ್ ಮತ್ತು ಟೊಬಾಗೊ, ಅರ್ಜೆಂಟೀನಾ, ಬ್ರೆಜಿಲ್ ಮತ್ತು ನಮೀಬಿಯಾಗಳಿಗೆ ಭೇಟಿ ನೀಡಲಿದ್ದಾರೆ. ತಮ್ಮ ನಿರ್ಗಮನ ಹೇಳಿಕೆಯಲ್ಲಿ ಪ್ರಧಾನಿ, ಘಾನಾ ಜಾಗತಿಕ ದಕ್ಷಿಣದಲ್ಲಿ ಮೌಲ್ಯಯುತ ಪಾಲುದಾರರಾಗಿದ್ದು, ಆಫ್ರಿಕನ್ ಒಕ್ಕೂಟ ಮತ್ತು ಪಶ್ಚಿಮ ಆಫ್ರಿಕಾದ ರಾಜ್ಯಗಳ ಆರ್ಥಿಕ ಸಮುದಾಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಒತ್ತಿ ಹೇಳಿದರು.  ಐತಿಹಾಸಿಕ ಸಂಬಂಧಗಳನ್ನು ಮತ್ತಷ್ಟು ಬಲಗೊಳಿಸುವುದು, ಹೂಡಿಕೆ, ಇಂಧನ, ಆರೋಗ್ಯ, ಭದ್ರತೆ, ಸಾಮರ್ಥ್ಯ ವೃದ್ಧಿ ಮತ್ತು ಅಭಿವೃದ್ಧಿ ಪಾಲುದಾರಿಕೆ ಕ್ಷೇತ್ರಗಳಲ್ಲಿ ಸಹಕಾರದ ಹೊಸ ಮಾರ್ಗಗಳನ್ನು ಎದುರು ನೋಡುತ್ತಿರುವುದಾಗಿ ಅವರು ತಿಳಿಸಿದರು. ಭೇಟಿಯ ವೇಳೆ ಪ್ರಧಾನಿ ನರೇಂದ್ರ ಮೋದಿ ಘಾನಾ ಸಂಸತ್ತನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.  ನಂತರ, ಪ್ರಧಾನಿ ನಾಳೆ ಟ್ರಿನಿಡಾಡ್ ಮತ್ತು ಟೊಬಾಗೊಗೆ ಎರಡು ದಿನಗಳ ಭೇಟಿಗಾಗಿ ತೆರಳಲಿದ್ದಾರೆ. ಪ್ರಧಾನಿ ಮೋದಿ ಟ್ರಿನಿಡಾಡ್ ಅಧ್ಯಕ್ಷೆ ಕ್ರಿಸ್ಟೀನ್ ಕಾರ್ಲಾ ಕಂಗಲೂ ಮತ್ತು ಪ್ರಧಾನಿ ಕಮಲಾ ಪರ್ಸಾದ್-ಬಿಸ್ಸೆಸ್ಸರ್ ಅವರನ್ನು ಭೇಟಿ ಮಾತುಕತೆ ನಡೆಸಲಿದ್ದಾರೆ. ಈ ಭೇಟಿಯು ಭಾರತ ಮತ್ತು ಟ್ರಿನಿಡಾಡ್ ಹಾಗೂ ಟೊಬಾಗೊವನ್ನು ಒಂದುಗೂಡಿಸುವ ವಿಶೇಷ ಬಂಧಗಳನ್ನು ಪುನರುಜ್ಜೀವನಗೊಳಿಸಲು ಅವಕಾಶವನ್ನು ಒದಗಿಸುತ್ತದೆ.  ನಂತರ ಪ್ರಧಾನಿಯವರು ಅರ್ಜೆಂಟೀನಾಗೆ ಪ್ರಯಾಣಿಸಲಿದ್ದಾರೆ. ಅವರು ಇದೇ ೫ ರಿಂದ ೮ ರವರೆಗೆ ಬ್ರೆಜಿಲ್‌ಗೆ ಪ್ರಯಾಣಿಸಲಿದ್ದು, ನಂತರ ೨೦೨೫ ರ ೧೭ ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಇದು ಪ್ರಧಾನಿಯವರ ಬ್ರೆಜಿಲ್‌ಗೆ ನಾಲ್ಕನೇ ಭೇಟಿಯಾಗಲಿದೆ. ಶೃಂಗಸಭೆಯ ಸಮಯದಲ್ಲಿ, ಪ್ರಧಾನ ಮಂತ್ರಿಯವರು ಜಾಗತಿಕ ಆಡಳಿತದ ಸುಧಾರಣೆ, ಶಾಂತಿ ಮತ್ತು ಭದ್ರತೆ, ಬಹುಪಕ್ಷೀಯತೆಯನ್ನು ಬಲಪಡಿಸುವುದು, ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ, ಹವಾಮಾನ ಕ್ರಮ, ಜಾಗತಿಕ ಆರೋಗ್ಯ, ಆರ್ಥಿಕ ಮತ್ತು ಆರ್ಥಿಕ ವಿಷಯಗಳು ಸೇರಿದಂತೆ ಪ್ರಮುಖ ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಬ್ರೆಸಿಲಿಯಾಕ್ಕೆ ಭೇಟಿ ನೀಡಲಿದ್ದಾರೆ. ನಮೀಬಿಯಾ ಸಂಸತ್ತಿನ ಜಂಟಿ ಅಧಿವೇಶನವನ್ನು ಸಹ ಉದ್ದೇಶಿಸಿ ಪ್ರಧಾನಿ ನರೇಂದ್ರ ಮಾತನಾಡಲಿದ್ದಾರೆ.

<><><><>

ವಿಶ್ವಸಂಸ್ಥೆಯ ಅಣುಶಕ್ತಿ ನಿಗಾ ಸಂಘಟನೆ - ಐಎಇಎ ಗೆ ಸಹಕಾರ ಸ್ಥಗಿತಗೊಳಿಸುವ ವಿಧೇಯಕಕ್ಕೆ ಇರಾನ್ ಅಧ್ಯಕ್ಷ ಮಸೂದ್ ಪೆಝೆಷ್ಕಿಯನ್ ಇಂದು ಅಂಕಿತ ಹಾಕಿದ್ದಾರೆ. ಇದು ಇರಾನ್ ಕೈಗೊಂಡ ಅತ್ಯಂತಗ ಕಠಿಣ ನಿಲುವಾಗಿದೆ. ಇರಾನ್‌ನ ಸಂಸತ್ ಈ ವಿಧೇಯಕಕ್ಕೆ ಬಾರಿ ಬೆಂಬಲ ನೀಡಿದ ಹಿನ್ನೆಲೆಯಲ್ಲಿ ಐಎಇಎ ಗೆ ಸಹಕಾರ ಸ್ಥಗಿತಗೊಳಿಸುವ ತೀರ್ಮಾನಕ್ಕೆ ಬರಲಾಗಿದೆ ಎಂದು ಇರಾನ್‌ನ ಅಧಿಕೃತ ಪ್ರಸಾರ ಸಂಸ್ಥೆ ವರದಿ ಮಾಡಿದೆ.

<><><><>

ಮಿಲಿಟರಿ ಸಾಮಗ್ರಿಗಳ ಸಂಗ್ರಹ ಪರಿಶೀಲನೆ ನಡೆಸುತ್ತಿರುವ ಕಾರಣ ಅಮೆರಿಕದ ಟ್ರಂಪ್ ಆಡಳಿತ ಉಕ್ರೇನ್‌ಗೆ ನೀಡುತ್ತಿರುವ ಮಿಲಿಟರಿ ನೆರವನ್ನು ಭಾಗಶಃ ಸ್ಥಗಿತಗೊಳಿಸಿದೆ. ಅಮೆರಿಕದ ಮಿಲಿಟರಿ ಉಪಕರಣಗಳ ಸಂಗ್ರಹ ಕಡಿಮೆಯಾಗಿದೆ ಎನ್ನುವ ಕಳವಳದ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ. ಅಮೆರಿಕದ ಹಿತಾಸಕ್ತಿ ಮೊದಲ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಸ್ಥಗಿತದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಶ್ವೇತಭವನದ ವಕ್ತಾರ ಅಣ್ಣಾ ಕೆಲ್ಲಿ ಹೇಳಿದ್ದಾರೆ. ಅಮೆರಿಕ ಉಕ್ರೇನ್‌ಗೆ ಮೂರು ವರ್ಷಗಳ ಕಾಲ ಮಿಲಿಟರಿ ನೆರವು ಒದಗಿಸಿದ ಹಿನ್ನೆಲೆಯಲ್ಲಿ ಅಮೆರಿಕ ರಕ್ಷಣಾ ಸಚಿವ ಪಿಎಟ ಹೆಗ್ಸೇತ್ ಶಸ್ತ್ರಾಸ್ತ್ರ ಸಂಗ್ರಹ ಪರಿಶೀಲಿಸಲು ಆದೇಶ ನೀಡಿದ್ದರು.

<><><>

ಕೇಂದ್ರ ಉಕ್ಕು ಮತ್ತು ಭಾರೀ ಉದ್ದಿಮೆ ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಯುಎಇನಲ್ಲಿ ಉನ್ನತ ಮಟ್ಟದ ನಿಯೋಗದೊಂದಿಗೆ ವ್ಯಾಪಕ ಚರ್ಚೆ ನಡೆಸಿದ್ದು, ದ್ವಿಪಕ್ಷೀಯ ವ್ಯಾಪಾರ ಸಂಬಂಧ ಮತ್ತು ಔದ್ಯಮಿಕ ಸಹಕಾರ ಉತ್ತಮಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಭಾರತೀಯ ಉಕ್ಕು ಪ್ರಾಧಿಕಾರ ಮೆಕಾನ್ ಲಿಮಿಟೆಡ್ ಮತ್ತು ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ ಹಿರಿಯ ಪ್ರತಿನಿಧಿಗಳು ಉನ್ನತ ಮಟ್ಟದ ನಿಯೋಗದಲ್ಲಿ ಪಾಲ್ಗೊಂಡಿದ್ದರು. ಸಚಿವ ಕುಮಾರಸ್ವಾಮಿ ಅವರು ತಮ್ಮ ಮೂರು ದಿನಗಳ ಭೇಟಿ ಸಂದರ್ಭದಲ್ಲಿ ಯುಎಇ ಆರ್ಥಿಕ ಸಚಿವ ಅಬ್ದುಲ್ಲಾ ಬಿನ್ ತೌ ಅಲ್ ಮಾರಿ ಅವರೊಂದಿಗೆ ವ್ಯಾಪಾರ ಮತ್ತು ಆರ್ಥಿಕ ಸಂಬಂಧ ಬಲಪಡಿಸುವ ಬಗ್ಗೆ ಮಾತುಕತೆ ನಡೆಸಿದರು. ಅವರು ಶೇಖ್ ಸೌದ್ ಬಿನ್ ಸಕ್ರ್ ಅಲ್ ಕ್ವಾಸ್ಮಿ ಅವರೊಂದಿಗೆ ಹಸಿರು ಉಕ್ಕು ಉಪಕ್ರಮಗಳ ಬಗ್ಗೆ ಚರ್ಚೆ ನಡೆಸಿದರು. ಇದೇ ಸಂದರ್ಭದಲ್ಲಿ ಯುಎಇ ದಲ್ಲಿರುವ ಕನ್ನಡಿಗರ ಜೊತೆಗೆ ದುಂಡು ಮೇಜಿನ ಚರ್ಚೆ ನಡೆಸಿದರು.

<><><>

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರ ರಾಷ್ಟ್ರಮಟ್ಟದ ಅಧಿವೇಶನ ಹರಿಯಾಣದ ಮನೇಸರ್‌ದಲ್ಲಿ ನಾಳೆ ಆರಂಭವಾಗಲಿದೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಎರಡು ದಿನಗಳ ಈ ಅಧಿವೇಶನ ಉದ್ಘಾಟಿಸಲಿದ್ದಾರೆ. ಸಾಂವಿಧಾನಿಕ ಪ್ರಜಾತಂತ್ರ ಬಲವರ್ಧನೆ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪಾತ್ರ ಎನ್ನುವುದು ಅಧಿವೇಶನದ ವಿಷಯವಾಗಿದೆ.

<><><>

ಪವಿತ್ರ ಅಮರನಾಥ್ ಯಾತ್ರೆಗೆ ನಾಳೆ ಅಧಿಕೃತ ಚಾಲನೆ ದೊರಕಲಿದೆ. ೩೮ ದಿನಗಳ ಈ ಯಾತ್ರೆಗಾಗಿ ವ್ಯಾಪಕ ಸುರಕ್ಷತಾ ಬಂದೋಬಸ್ತ್ ಮಾಡಲಾಗಿದೆ. ಕಾಶ್ಮೀರ್ ವಲಯದ ಹಿಮಾಲಯ ಭಾಗದಲ್ಲಿ ಸುಮಾರು ೧೨ ಸಾವಿರದ ೭೫೬ ಅಡಿ ಎತ್ತರದಲ್ಲಿರುವ ಅಮರನಾಥ ಗುಹಾಂತರ ದೇವಾಲಯದಲ್ಲಿ ಹಿಮದ ಶಿವಲಿಂಗ ರೂಪುಗೊಳ್ಳುವುದು ವಿಶೇಷವಾಗಿದೆ. ಜಮ್ಮುವಿನ ಭಗವತಿನಗರದ ಬೇಸ್ ಕ್ಯಾಂಪ್‌ನಿಂದ ಹೊರಟ ಶ್ರದ್ಧಾಳುಗಳ ಮೊದಲ ತಂಡದ ಯಾತ್ರೆಗೆ ಲೆಫ್ಟಿನೆಂಟ್ ಗವರ್ನರ್ ಮನೋಜ್‌ಸಿನ್ಹಾ ಚಾಲನೆ ನೀಡಿದ್ದು, ಈ ತಂಡ ಕಾಶ್ಮೀರ ತಲುಪಿದೆ. ದಕ್ಷಿಣ ಕಾಶ್ಮೀರಕ್ಕೆ ಆಗಮಿಸಿದ ಈ ತಂಡಗಳನ್ನು ದಕ್ಷಿಣ ಕಾಶ್ಮೀರ ಡಿಐಜಿ ಜಾವೆದ್ ಇಕ್ಬಾಲ್ ಸ್ವಾಗತಿಸಿದರು. ಬಾಲ್ಟಾಲ್ ಮಾರ್ಗದ ಮೂಲಕ ೨ ಸಾವಿರದ ೩೦೦ ಯಾತ್ರಾರ್ಥಿಗಳು ೨೯೯ ವಾಹನಗಳಲ್ಲಿ ಆಗಮಿಸಿದ್ದು, ಪಹಲ್ಗಾಮ್ ಮಾರ್ಗದ ಮೂಲಕ ೩ ಸಾವಿರಕ್ಕೂ ಹೆಚ್ಚು ಯಾತ್ರಾರ್ಥಿಗಳು ಆಗಮಿಸಿದ್ದಾರೆ ಎಂದು ನಮ್ಮ ಶ್ರೀನಗರ ಪ್ರತಿನಿಧಿ ವರದಿ ಮಾಡಿದ್ದಾರೆ.

<><><>

ಉದ್ಯೋಗ ಸಂಬಂಧಿತ ಪ್ರೋತ್ಸಾಹ ಯೋಜನೆಯಡಿ ಮುಂದಿನ ೪ ವರ್ಷಗಳಲ್ಲಿ ಉದ್ಯೋಗಿ ಹಾಗೂ ಉದ್ಯೋಗ ದಾತರಿಗೆ ಒಟ್ಟು ೧ ಲಕ್ಷ ಕೋಟಿ ರೂಪಾಯಿ ಒದಗಿಸಲಾಗುವುದು ಎಂದು ಕಾರ್ಮಿಕ ಹಾಗೂ ಉದ್ಯೋಗ ಖಾತೆ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ. ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ಈ ಯೋಜನೆ ಸರ್ಕಾರದ ಉದ್ಯೋಗ ಕೇಂದ್ರಿತ ನೀತಿಯಾಗಿದೆ. ಯೋಜನೆಯಡಿ ಹೊಸದಾಗಿ ಉದ್ಯೋಗ ಸೇರುವ ವ್ಯಕ್ತಿಗೆ ವರ್ಷಕ್ಕೆ ೨ ಬಾರಿ ಏಳೂವರೆ ಸಾವಿರ ರೂಪಾಯಿ ನೀಡಲಾಗುತ್ತದೆ ಎಂದು ತಿಳಿಸಿದರು. ಯುವಜನತೆಗೆ ಉದ್ಯೋಗ ಖಾತರಿಪಡಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ೫ ವರ್ಷಗಳ ಕಾರ್ಯಕ್ರಮವೊಂದನ್ನು ರೂಪಿಸಿದ್ದಾರೆ ಎಂದು ಮನ್ಸುಖ್ ಮಾಂಡವೀಯ ತಿಳಿಸಿದರು.

<><><>

ಭಾರತದಲ್ಲಿ ೨೦೨೩ರ ಅಂಕಿ-ಅಂಶಗಳ ಪ್ರಕಾರ ಸುಮಾರು ೨೫ ಲಕ್ಷದ ೪೪ ಸಾವಿರ ಎಚ್‌ಐವಿ ಪೀಡಿತ ಜನರಿದ್ದಾರೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮತ್ತು ರಾಷ್ಟ್ರೀಯ ಸಾಂಕ್ರಾಮಿಕ ರೋಗ ಅಧ್ಯಯನ ಸಂಸ್ಥೆ ನಡೆಸಿದ ಅಧ್ಯಯನದಲ್ಲಿ ಈ ಅಂಶ ವ್ಯಕ್ತವಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಒಟ್ಟು ೬ ಲಕ್ಷ ೩೫ ಸಾವಿರ ಎಚ್‌ಐವಿ ಪೀಡಿತರಿದ್ದಾರೆ. ಕರ್ನಾಟಕದಲ್ಲಿ ೨ ಲಕ್ಷ ೮೦ ಸಾವಿರ, ತಮಿಳುನಾಡಿನಲ್ಲಿ ೧ ಲಕ್ಷ ೬೯ ಸಾವಿರ ಮತ್ತು ತೆಲಂಗಾಣದಲ್ಲಿ ೧ ಲಕ್ಷ ೫೮ ಸಾವಿರ ಎಚ್‌ಐವಿ ಪೀಡಿತರಿದ್ದು, ಇದು ರಾಷ್ಟ್ರೀಯ ಅಂಕಿ-ಅಂಶದ ಶೇಕಡ ೨೪ರಷ್ಟಾಗಿದೆ. ೨೦೨೩ರಲ್ಲಿ ದೇಶದಲ್ಲಿ ಅಂದಾಜು ೬೮ ಸಾವಿರದ ೪೫೦ ಜನರು ಹೊಸದಾಗಿ ಎಚ್‌ಐವಿ ಸೋಂಕಿಗೆ ಒಳಗಾಗಿದ್ದಾರೆ. ಇವುಗಳಲ್ಲಿ ಕರ್ನಾಟಕ, ತೆಲಂಗಾಣ, ತಮಿಳುನಾಡು ವಾರ್ಷಿಕ ಹೊಸ ಸೋಂಕಿನ ಪಾಲು ಶೇಕಡ ೧೧.೫ ರಷ್ಟಿದೆ. ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳ ೭ ಜಿಲ್ಲೆಗಳಿಂದ ಅಧಿಕ ಹೊಸ ಸೋಂಕು ವರದಿಯಾಗಿದೆ. ೨೦೩೦ರ ವೇಳೆಗೆ ಏಡ್ಸ್ ಲಕ್ಷಣಗಳನ್ನು ನಿವಾರಿಸುವ ಗುರಿ ಸಾಧಿಸಲು ಮುನ್ನೆಚ್ಚರಿಕೆ ಕ್ರಮ, ತಪಾಸಣೆ, ಉಪಚಾರದ ಕಾರ್ಯತಂತ್ರ ಹಾಗೂ ಅಪಾಯವಿರುವ ಪ್ರದೇಶಗಳಲ್ಲಿ ತಡೆ ಕಾರ್ಯಕ್ರಮಗಳನ್ನು ಬಲಗೊಳಿಸುವ ಅಗತ್ಯವಿದೆ ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ.

<><><><>

ದೆಹಲಿ-ವಡೋದರಾ ಮತ್ತು ಜೈಪುರ್ ನಡುವೆ ಸಂಪರ್ಕ ಕಲ್ಪಿಸುವ ೬೬.೯೧ ಕಿಲೋಮೀಟರ್ ಉದ್ದದ ನಾಲ್ಕು ಪಥದ ಹಸಿರು ವಲಯದ ಬಂಡಿಕುಯಿ ಮಾರ್ಗ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಸಾಮಾಜಿಕ ಪೋಸ್ಟ್‌ನಲ್ಲಿ ಇಂದು ಮಾಹಿತಿ ಹಂಚಿಕೊಂಡಿರುವ ಅವರು, ಎರಡು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚದಲ್ಲಿ ಯೋಜನೆ ಪೂರ್ತಿಗೊಳಿಸಲಾಗಿದೆ. ಈ ಹಿಂದೆ ಪ್ರಯಾಣಿಕರು ನೇರ ಸಂಪರ್ಕ ಇಲ್ಲದೆ, ಸಾಕಷ್ಟು ಸಮಯ ವ್ಯಯ ಮಾಡಬೇಕಾಗಿತ್ತು. ಇದೀಗ ಈ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾಗಿದೆ. ಹೊಸ ಮಾರ್ಗ ದೆಹಲಿ ಮತ್ತು ಜೈಪುರ ನಡುವಿನ ಪ್ರಯಾಣದ ಸಮಯವನ್ನು ಮೂರು ಗಂಟೆ ೪೫ ನಿಮಿಷಗಳಿಂದ ಕೇವಲ ಮೂರು ಗಂಟೆಗಳಿಗೆ ಇಳಿಸಲಿದೆ. ಇದು ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಹೆದ್ದಾರಿ-೪೮ ಮತ್ತು ೨೧ ರಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಎಂದು ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

<><><><>

ದೇಶದ ಉತ್ತರ ರಾಜ್ಯಗಳ ಕೆಲವು ಪ್ರದೇಶಗಳಲ್ಲಿ ಮುಂದಿನ ೫ ದಿನಗಳ ಕಾಲ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಧ್ಯಪ್ರದೇಶ, ವಿದರ್ಭ, ಛತ್ತೀಸ್‌ಗಢಗಳ ಕೆಲವು ಪ್ರದೇಶಗಳಲ್ಲಿ ಶನಿವಾರದವರೆಗೆ ಭಾರೀ ಮಳೆಯಾಗಲಿದೆ. ಪೂರ್ವ ರಾಜಸ್ಥಾನದಲ್ಲಿ ಶುಕ್ರವಾರದವರೆಗೆ ಭಾರೀ ಮಳೆಯಾಗಲಿದೆ. ಇದಲ್ಲದೇ ಕೊಂಕಣ, ಗೋವಾ, ಮಧ್ಯಪ್ರದೇಶ ಮತ್ತು ಗುಜರಾತ್‌ಗಳ ಘಟ್ಟಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯಾಗಲಿದ್ದು, ಸೌರಾಷ್ಟ್ರ ಮತ್ತು ಕಚ್‌ಗಳಲ್ಲಿ ಮುಂದಿನ ೭ ದಿನಗಳ ಕಾಲ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

<><><><>

ಭಾರತ-ಇಂಗ್ಲೆಂಡ್ ನಡುವಿನ ೨ನೇ ಟೆಸ್ಟ್ ಕ್ರಿಕೆಟ್ ಬರ್ಮಿಂಗ್ ಹ್ಯಾಮ್‌ನಲ್ಲಿ ಆರಂಭವಾಗಿದೆ. ಟಾಸ್ ಗೆದ್ದ ಇಂಗ್ಲೆಂಡ್ ತಂಡ ಫೀಲ್ಡಿಂಗ್ ಆಯ್ದುಕೊಂಡಿದೆ. ಭಾರತ ಇತ್ತೀಚಿನ ವರದಿ ಬಂದಾಗ ಮೊದಲ ಇನ್ನಿಂಗ್ಸ್‌ನಲ್ಲಿ ೪೫.೧ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೧೬೧ ರನ್ ಗಳಿಸಿದೆ. ಕೆ ಎಲ್ ರಾಹುಲ್ ೨, ಜೈಸ್ವಾಲ್ ೮೭ ಹಾಗೂ ಕರುಣ್ ನಾಯರ್ ೩೧ ರನ್ ಗಳಿಸಿ ಔಟ್ ಆಗಿದ್ದಾರೆ. ಭಾರತ ಮೂರು ಪ್ರಮುಖ ಬದಲಾವಣೆಯನ್ನು ಮಾಡಿದ್ದು, ಜಸ್ಪ್ರೀತ್ ಬೂಮ್ರಾ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಆಕಾಶ್ ದೀಪ್ ತಂಡದಲ್ಲಿದ್ದಾರೆ. ಶಾರ್ದೂಲ್ ಠಾಕೂರ್ ಮತ್ತು ಸಾಯಿ ಸುದರ್ಶನ್ ಬದಲು ವಾಷಿಂಗ್‌ಟನ್ ಸುಂದರ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಸ್ಥಾನ ಪಡೆದಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>